ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ವಿಷಯವನ್ನು ನಿಖರವಾಗಿ ತಿಳಿಸಿದರೆ ಸಂಬಂಧಪಟ್ಟವರಿಗೆ ಹೇಳಿ ಕ್ರಮ ಕೈಗೊಳ್ಳುವಂತೆ ಮಾಡ ತ್ತೇನೆ.

ಅಧ್ಯಕ್ಷರು.—ಮಂತ್ರಿಗಳ ಚೇಂಬರಿಗೆ ಹೋಗಿ ಮಾತನಾಡಿ.

Working of Youth Clubs in Raibag Taluk.

590. SRI R.S. NADONI (Raibag).—Will the Minister of State for Information and Youth Services be pleased to state.—

(a) the number of youth clubs in Raibag and the date on which they were registered ;

(b) the amount sanctioned to the youth clubs every year for the development of various activities ;

(c) whether the sanctioned amount has been properly utilised ; if so whether the department has conducted any investigation regarding proper utilisation of amount ;

(d) the number of wrestlers in Raibag ;

(e) whether the certificate holders and adult wrestlers have submitted representations to the Government for monthly pension if so, the amount of monthly pension sanctioned to each of the wrestler ?

SRI K. GANGADHAR (Minister of State for Information and Youth Services).—

(a)	(1) Youth clubs	...	54
	(2) Ladies clubs	...	2
	(3) Cultural groups	...	1

The details regarding the dates on which they were registered are given in annexure 'A' placed on the Table of the House*

(b) The details are given in the annexure 'B' placed on the Table of the House*

(c) Yes.

(d) 46 (Forty-six)

(e) No.

ಶ್ರೀ ಆರ್. ಎಸ್. ನಡೋಣಿ.— ರಾಯಬಾಗ್ ತಾಲ್ಲೂಕಿನಲ್ಲಿ ೪೬ ಯುವಕ ಸಂಘಗಳಿವೆ ಎಂದು ಹೇಳಿದ್ದೀರಿ. ಅವುಗಳ ಪೈಕಿ ಹಿಂದುಳಿದ ವರ್ಗದವರಿಗೆ ಸೇರಿದ ಸಂಘಗಳು ಎಷ್ಟು ?

ಶ್ರೀ ಗಂಗಾಧರ ಗೌಡ.— ಆ ವಿವರ ಈಗ ನನ್ನ ಕಡೆ ಇಲ್ಲ.

ಶ್ರೀ ಆರ್. ಎಸ್. ನಡೋಣಿ.— ಏತಕ್ಕೆ ಹೇಳುತ್ತಿದ್ದೇನೆಂದರೆ, ನಾನು ಬರುವಾಗ ಎರಡು ಹರಿಜನ-ಗಿರಿಜನ ಸಂಘಗಳನ್ನು ರಿಜಿಸ್ಟರ್ ಮಾಡುವ ಸಲುವಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಭೇಟಿ

* Lib. No. 18. dated 14-6-1982.

ಯಾಗಿ ಹೇಳಿ ಬಂದಿದ್ದೆ. ಆಲ್ಲಿ ಬೇರೆ ಬೇರೆ ಸಂಘಗಳು ಬಂದಿವೆ. ಆದರೆ ನಾನು ಹೇಳಿದ ಎರಡು ಸಂಘಗಳು ಮಾತ್ರ ಬಂದಿಲ್ಲ. ಆದ್ದರಿಂದ, ಆ ಬಗ್ಗೆ ಪರಿಶೀಲಿಸಿ ಅವುಗಳನ್ನು ರಿಜಿಸ್ಟರ್ ಮಾಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಗಂಗಾಧರ ಗೌಡ.— ಆ ವಿವರಗಳನ್ನು ಕಳುಹಿಸಿಕೊಟ್ಟರೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಆರ್. ಎಸ್. ನಡೋಣಿ.— ಮಶಾಸನ ಪಡೆಯತಕ್ಕ ವಯಸ್ಕ ಕುಸ್ತಿ ಪಟುಗಳು ಎಷ್ಟು ಮಂದಿ ಇದ್ದಾರೆಂದು ಬೆಳಗಾಂನ ಅಧಿಕಾರಿಗಳನ್ನು ಭೇಟಿಯಾಗಿ ಕೇಳಿದಾಗ ಅವರು ಇಲ್ಲಿಯವರೆಗೆ ಒಂದು ಅರ್ಜಿಯೂ ಬಂದಿಲ್ಲವೆಂದು ಹೇಳಿದರು, ಆದ್ದರಿಂದ, ತಾವು ಇದನ್ನು ಪರಿಶೀಲಿಸುತ್ತೀರಾ ?

ಶ್ರೀ ಗಂಗಾಧರ ಗೌಡ,— ಮಾನ್ಯ ಸದಸ್ಯರು ತಾಲ್ಲೂಕು ಬೋರ್ಡಿನ ಸದಸ್ಯರಾಗಿರುವುದರಿಂದ ಅವರು ಆಲ್ಲಿ ಇದನ್ನು ಪ್ರಶ್ನಿಸಬಹುದು.

ಅಧ್ಯಕ್ಷರು.— ತಾವೇ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡುತ್ತೀರಾ ಎಂದು ಕೇಳುತ್ತಾರೆ.

ಶ್ರೀ ಗಂಗಾಧರ ಗೌಡ.— ಮಾನ್ಯ ಸದಸ್ಯರು ವಿವರ ತಿಳಿಸಿದರೆ ಜಿಲ್ಲಾಧಿಕಾರಿಗಳಿಗೆ ತಿಳಿಸಿ ಸಂಘಗಳನ್ನು ರಿಜಿಸ್ಟರ್ ಮಾಡಿಸುತ್ತೇನೆ.

ಶ್ರೀ ಕೆ. ಹೆಚ್. ರಾಮಕೃಷ್ಣಯ್ಯ.— (ಸದಸ್ಯರು ಹಾಜರಿರಲಿಲ್ಲ)

Air Ports in the State

700 SRI M. GANGANNA (Kustagi)— Will the Minister for Public Works be pleased to state,

(a) the total number of air ports in the State.

(b) out of them, the number of air ports in use.

(c) the places where there are open space air ports and whether they are in use.

(d) whether feeder services between Mangalore-Mysore-Bangalore and Belgaum-Bellary-Bangalore cities had been proposed to be taken up in Second Five Year Plan, if so, its stage at present.

(e) the cities between which the Central Government is decided to commence new feeder services.

(f) if so. decided, when they would be commenced ?

SRI KAGODU THIMMAPPA (Minister for Public Works).—

(a) Total number of air ports in the State–12

(b) Airports in use–7

(c) open space airports–4. (1) Hassan (2) Bellary (3) Ginigera and (4) Raichur Above mentioned airports are not in use.

(d) No.

(e) Raichur and Hubli

(f) This matter relates to Central Government. Therefore correspondence would be made with the Central Government.